# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 21, ಹೆಬ್ಬಾಳ, ಬೆಂಗಳೂರು-24

ಸಂಖ್ಯೆ: ಸ.ಅ/ವಾ-21/ಪಿ.ಆರ್/28/2022-23

ದಿನಾಂಕ:-08-08-2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

ವಿಷಯ:-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-06-08-2022 ರಂದು ವಾರ್ಡ್ ನಂ:21 ಹೆಬ್ಬಾಳದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

## :: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಗಿರೀಶ್.ವಿ.ಕೆ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ ಮೋಹನ್ ಕುಮಾರ್ | ಕಾರ್ಯದರ್ಶಿಗಳು<br>ಹಾಗೂ ಸಹಾಯಕ ಅಭಿಯಂತರರು,<br>ವಾರ್ಡ್ ಸಂಖ್ಯೆ-21 |
| 3. | ಶ್ರೀ. ಶ್ರೇಯಸ್ ಎಂ.ಎಸ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್)<br>ವಾಡ್ ನಂ. 21 |
| 4. | ಶ್ರೀ. ಜಿ.ಸ್ವಾಮಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5. | ಶ್ರೀ. ಸೀನಪ್ಪ | ಅಧ್ಯಕ್ಷರು 1ನೇ ಬ್ಲಾಕ್ ಆನಂದ ನಗರ |
| 6. | ಶ್ರೀ.ಕ್ಯಾಪ್ಟನ್ ರಾಮಚಂದ್ರ | ಅಧ್ಯಕ್ಷರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ. |
| 7. | ಶ್ರೀ. ವೀರಶೇಖರ ಸ್ವಾಮಿ | ಕಾರ್ಯದರ್ಶಿ, ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, |
| 8. | ಶ್ರೀ. ಎ.ಕೆ.ಎನ್.ಮೂರ್ತಿ | ಸ್ಥಳೀಯ ನಿವಾಸಿ |
| 9. | ಶ್ರೀಮತಿ ಉಮಾರಾಮಸ್ವಾಮಿ | ಸ್ಥಳೀಯ ನಿವಾಸಿ |
| 10. | ಶ್ರೀ. ಉಮಾಶಂಕರ್ | ಸ್ಥಳೀಯ ನಿವಾಸಿ |
| 11. | ಶ್ರೀ. ಸುಬ್ಬರಾವ್ | ಸ್ಥಳೀಯ ನಿವಾಸಿ |
| 12. | ಶ್ರೀ. ಸಂಜಯ್ | ಸ್ಥಳೀಯ ನಿವಾಸಿ |
| 13. | ಡಾ.ಶಾಲಿನಿ ದೇಶಪಾಂಡೆ | ಸ್ಥಳೀಯ ನಿವಾಸಿ |
| 14. | ಡಾ.ನಟರಾಜ್ ಅರಸ್ | ಸ್ಥಳೀಯ ನಿವಾಸಿ |

ವಾರ್ಡ್ ಸಮಿತಿಗೆ ಹೊಸದಾಗಿ ನೇಮಕವಾದ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ. ಗಿರೀಶ್.ವಿ.ಕೆ ರವರನ್ನು ಹಾಗೂ ವಾರ್ಡ್ ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಈ ದಿನ ನಡೆದ ಸಭೆಯಲ್ಲಿ ಸಾರ್ವಜನಿಕರು ಈ ಕೆಳಕಂಡ ಕುಂದು ಕೊರತೆಗಳನ್ನು ಮನವಿ ಸಲ್ಲಿಸಿರುತ್ತಾರೆ.

1. ರಸ್ತೆ ಬೀದಿ ದೀಪಗಳ ನಿರ್ವಹಣೆ ಮಾಡಲು ಇಂಜಿನಿಯರ್ ಆದ ಶ್ರೀ. ಆನಂದ್ ರವರಲ್ಲಿ ವಾರ್ಡ್‌ನಲ್ಲಿರುವ ಬೀದಿ ದೀಪಗಳ ಸಮಸ್ಯೆಯನ್ನು ಮತ್ತು ಬೀದಿ ದೀಪ ಇಲ್ಲದ ಕಡೆ ಹೊಸ ಬೀದಿ ದೀಪಗಳನ್ನು ಹಾಕಲು ಸಾರ್ವಜನಿಕರು ಕೋರಿದರು.
2. ವಾರ್ಡ್‌ನಲ್ಲಿರುವ ಉದ್ಯಾನವನಗಳಿಗೆ ಫೆನ್ಸಿಂಗ್ ಹಾಳಾಗಿದ್ದು, ಇದನ್ನು ಸರಿಪಡಿಸಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಲಾಯಿತು.
3. ವಾರ್ಡ್‌ನಲ್ಲಿರುವ ಫುಟ್‌ಪಾತ್‌ಗಳನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು.
4. ಆನಂದನಗರ 7ನೇ ಮುಖ್ಯರಸ್ತೆಯಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಿದ್ದು, ಅದಕ್ಕೆ ಸಂಪರ್ಕ ನೀಡಲು ನಿವಾಸಿಗಳು ಮನವಿ ಸಲ್ಲಿಸಿದರು.

5. ಆನಂದನಗರದಲ್ಲಿ ವಸತಿ ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳು ಆರಂಭಿಸುತ್ತಿದ್ದು, ಅದನ್ನು ತಡೆಯಲು ಸಾರ್ವಜನಿಕರು ಆರೋಗ್ಯ ವೈದ್ಯಾಧಿಕಾರಿ ರವರಲ್ಲಿ ಮನವಿ ಮಾಡಿದರು.
6. ವಾರ್ಡ್‌ನಲ್ಲಿರುವ ಎಲ್ಲಾ ಚರಂಡಿಯ ಹೂಳು ತೆಗೆಯುವಂತೆ ಸಾರ್ವಜನಿಕರು ಕೋರಿದರು.
7. ವಾರ್ಡ್‌ನಲ್ಲಿ ಕಸ ವಿಲೇವಾರಿಯು ಸಮರ್ಪಕವಾಗಿ ನಿರ್ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
8. ಹೆಚ್.ಎಂ.ಟಿ ಬಡಾವಣೆಯ ವಿ.ವಿ ಪಾರ್ಕ್ ಅನ್ನು ನಿರ್ವಹಿಸಲು ಉದ್ಯಾನವನ ವಿಭಾಗದ ಅಧಿಕಾರಿಗಳಿಗೆ ಕೋರಲಾಯಿತು.
9. ಶ್ರೀ.ಸಾಯಿ ಮಂದಿರದ ಬಳಿ ಇರುವ ಪುಟ್‌ಪಾತ್‌ನಲ್ಲಿ ದೇವರ ಪೋಟೋಗಳಿದ್ದು, ಅವುಗಳನ್ನು ತೆರವು ಮಾಡಲು ಘನತ್ಯಾಜ್ಯ ವಿಭಾಗದವರಿಗೆ ಸೂಚಿಸಲಾಯಿತು.
10. ಆನಂದನಗರದಲ್ಲಿ ಹಳೆಯದಾದ ಟ್ರಾನ್ಸ್‌ಫಾರ್ಮರ್ ಇದ್ದು, ಅದನ್ನು ಬದಲಾಯಿಸಿ ಕೊಡಲು ಸಾರ್ವಜನಿಕರು ವಿದ್ಯುತ್ ವಿಭಾಗದವರಿಗೆ ಕೋರಿದರು.
11. ಆನಂದನಗರ ಪಾರ್ಕ್‌ನಲ್ಲಿ ಹೊಸ ಒಳಾಂಗಣ ಕಟ್ಟಡವನ್ನು ನಿರ್ಮಿಸಿಕೊಡುವಂತೆ ಸಾರ್ವಜನಿಕರು ಕೋರಿದರು.
12. ವಾರ್ಡ್‌ನಲ್ಲಿರುವ ರಸ್ತೆಗಳಿಗೆ ಹೊಸದಾಗಿ ಡಾಂಬರೀಕರಣ ಮಾಡಿಕೊಡುವಂತೆ ಸಾರ್ವಜನಿಕರು ಮನವಿ ಸಲ್ಲಿಸಿದರು.

ಮೇಲ್ಕಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಕುಂದುಕೊರತೆಗಳನ್ನು ಆದಷ್ಟು ಬೇಗೆ ಹಂತ ಹಂತವಾಗಿ ಬಗೆಹರಿಸಲಾಗುವುದೆಂದು ವಾರ್ಡ್‌ನ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಕೋರುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

M ... AE

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 21, ಹೆಬ್ಬಾಳ

8/8/2022

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 21, ಹೆಬ್ಬಾಳ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ